2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ165/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂಜಯ್ ಇ | ಪಿಡಬ್ಲ್ಯೂ-4 |
| ತಂದೆಯ ಹೆಸರು | - | ಈಶ್ವರಪ್ಪ ಸಿ | ಸಿಡಬ್ಲ್ಯೂ -3 |
| ವಯಸ್ಸು | - | 25 ವರ್ಷ | |
| ಉದ್ಯೋಗ | - | ವ್ಯಾಪಾರ | |
| ವಾಸ ಸ್ಥಳ | - | ಅಂಚೆ ಚೋಮನಹಳ್ಳಿ | |

ದಿನಾಂಕಃ 03.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರಿರುವ ಆರೋಪಿತರು ಗೊತ್ತಿಲ್ಲ. ಚಾಸಾ.1 ಗೊತ್ತಿಲ್ಲ. ಚಾಸಾ.2 ಮತ್ತು 4 ರವರು ಗೊತ್ತು.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 15.07.2021 ರಂದು ಪಂಚನಾಮೆಯನ್ನು ಜರುಗಿಸಲು ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸಾಗಿದ್ದು ಅದನ್ನು ನಿಪಿ.14 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14 (ಎ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ.11(ಬಿ) ಎಂದು ಗುರುತಿಸಲಾಯಿತು.

4. ಹೇಮಗಿರಿಯಿಂದ ಕೋಡಿಹಳ್ಳಿಗೆ ಹೋಗುವ ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಮೀಪ ನಾನು ಪ್ರತೀ ದಿನ ವಾಕಿಂಗ್ ಗೆ ಹೋಗುತ್ತೇನೆ. ಅದರಂತೆ ನಾನು ದಿನಾಂಕ 15.07.2021 ರಂದು ಸದರಿ ಸ್ಥಳದಲ್ಲಿ ವಾಕಿಂಗ್ ಗೆ ಹೋಗಿದ್ದೆನು. ಅಲ್ಲಿಗೆ ಕಡೂರು ಪೊಲೀಸರು ಬಂದಿದ್ದರು. ಸದರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಕೆರೆಯ ಏರಿಯ ಇಳಿಜಾರಿನಲ್ಲಿ ಒಂದು ಗಂಡಸಿನ ಶವ ಬಿದ್ದಿರುವುದಾಗಿ ಚಾಸಾ.2 ರವರು ನಮಗೆ ಮತ್ತು ಪೊಲೀಸರಿಗೆ ತೋರಿಸಿದರು. ಕೆರೆಯ ಏರಿಯ ಇಳಿಜಾರಿನಲ್ಲಿ ಪೊದೆಯ ಮಧ್ಯದಲ್ಲಿ ಸದರಿ ಶವ ಬಿದ್ದಿತ್ತು. ಸದರಿ ಶವದ ಮುಖದಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಪೊಲೀಸರು ಶವ ಬಿದ್ದಿದ್ದ ಸ್ಥಳದಲ್ಲಿ ಮಹಜರ್ ಮಾಡಿಕೊಂಡರು ಮತ್ತು ಶವದ ಮೇಲೆ ಇದ್ದ ಬಟ್ಟೆಗಳ ಬಗ್ಗೆ ಬರೆದುಕೊಂಡರು. ಮಹಜರ್ ಗೆ ನಾನು, ಚಾಸಾ.2 ಮತ್ತು ಚಾಸಾ.4 ರವರು ಸಹಿ ಮಾಡಿದ್ದೇವೆ.

5. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ಚಾಸಾ.2 ರವರು ಪೊಲೀಸರಿಗೆ ನಮ್ಮ ಸಮಕ್ಷಮ ಗಂಡಸಿನ ಶವ ಬಿದ್ದಿದ್ದ

ಸ್ಥಳವನ್ನು ತೋರಿಸಿದ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.12 ಮತ್ತು ನಿಪಿ.13 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಪೊಲೀಸರು, ಚಾಸಾ.2 ಮತ್ತು 4 ರವರು ಇದ್ದಾರೆ.

6. ಸಾಕ್ಷಿಯು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ಆ ದಿನ ಕೆರೆಯ ಏರಿಯ ಇಳಿಜಾರಿನಲ್ಲಿ ಪೊದೆಯ ನಡುವೆ ಬಿದ್ದಿದ್ದ ಗಂಡಸಿನ ಶವ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಶವ ಬಿದ್ದಿದ್ದ ಸ್ಥಳದಿಂದ ಸುಮಾರು 30 ಅಡಿ ದೂರದ ಒಳಗೆ ಆಟೋ ಚಾಲಕರು ಧರಿಸುವ ಖಾಕಿ ಬಣ್ಣದ ಶರ್ಟ್, ಸೀಮೆಂಟ್ ಬಣ್ಣದ ಶಾಲ್ ಮತ್ತು ತಾಯತ ಬಿದ್ದಿತು. ಅವುಗಳನ್ನು ಪೊಲೀಸರು ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿಕೊಂಡು seize ಮಾಡಿಕೊಂಡು ಅದರ ಮೇಲೆ ನನ್ನ ಮತ್ತು ಚಾಸಾ.4 ರವರ ಸಹಿ ಇರುವ ಚೀಟಿಯನ್ನು ಅಂಟಿಸಿ ಶವವನ್ನು ಪೊದೆಯಿಂದ ಮೇಲಕ್ಕೆ ತಂದು ಅದರೊಂದಿಗೆ ಆ ವಸ್ತುಗಳನ್ನು ಠಾಣೆಗೆ ತೆಗೆದುಕೊಂಡು ಹೋದರು. ಪೊಲೀಸರು ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ ಮಹಜರ್ ಮಾಡಿಕೊಂಡಿರುತ್ತಾರೆ.

7. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಖಾಕಿ ಬಣ್ಣದ ಶರ್ಟ್, ಸೀಮೆಂಟ್ ಬಣ್ಣದ ಶಾಲ್ ಮತ್ತು ಕಪ್ಪು ಮತ್ತು ಬಿಳಿ ಬಣ್ಣ ದಾರದಲ್ಲಿರುವ ತಾಯತವನ್ನು ನೋಡಿ

ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ.7, 6 ಮತ್ತು 5 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

8. ಸಾಕ್ಷಿಗೆ ಹಸಿರು ಬಣ್ಣದ ಟೀ ಶರ್ಟನ್ನು ತೋರಿಸಿ ಆ ದಿನ ಪೊಲೀಸರು ಮೇಲೆ ಹೇಳಿದ ಮುದ್ದೆ ಮಾಲುಗಳೊಂದಿಗೆ ಮು.ಮಾ.8 ಎಂದು ಗುರುತಿಸಲ್ಪಟ್ಟಿರುವ ಸದರಿ ಶರ್ಟನ್ನು ಸಹ ಅಮಾನತುಪಡಿಸಿಕೊಂಡಿದ್ದಾರೆ ಎಂದರೆ ಸರಿ.

ಪಾಟೀ ಸವಾಲುಃ ಶ್ರೀಮತಿ ಕೆ ಎಂ ಕೆ ಆರೋಪಿತರ ಪರ ವಕೀಲರಿಂದಃ

9. ಶವ ಬಿದ್ದಿದ್ದ ಸ್ಥಳದಿಂದ ನಮ್ಮ ಮನೆಗೆ 1 ಕಿಲೋ ಮೀಟರ್ ದೂರ ಆಗುತ್ತದೆ. ಅಲ್ಲಿ ದೇವಸ್ಥಾನ ಇರುವ ಕಾರಣ ನಾವು ಪ್ರತೀ ದಿನ ಅದೇ ರಸ್ತೆಯಲ್ಲಿ ವಾಕ್ ಮಾಡುತ್ತೇವೆ. ಪೊಲೀಸರು ಮಹಜರ್ ನಲ್ಲಿ ಬರೆದುಕೊಂಡಿರುವ ವಿಚಾರಗಳು ನನಗೆ ಗೊತ್ತಿದೆ. ನಾನು ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ಮು.ಮಾ.5 ರಿಂದ 8 ಶವ ಬಿದ್ದಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಬಿದ್ದಿದ್ದವು. ನಾನು ಸ್ಥಳಕ್ಕೆ ಹೋದಾಗ ಸಂಜೆ 5.00 ಗಂಟೆಯಾಗಿತ್ತು. ಪೊಲೀಸರು ಮಹಜರನ್ನು ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ ಬರೆದಿದ್ದಾರೆ.

10. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.